ಪ್ರಧಾನ ಸಿವಿಲ್ ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕಡೂರು.

**O.S. No.53/2023. P.W.-2.**

ದಿನಾಂಕಃ**05.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಂ ಎನ್ ವಕೀಲರಿಂದಃ-

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ನಾನು ಹೇಳಿದಂತೆ ನಮ್ಮ ವಕೀಲರು ಬರೆದಿರುತ್ತಾರೆ. ನಾನು ಬೀರೂರಿನ ಬಳ್ಳಾರಿ ಕ್ಯಾಂಪ್ ವಾಸಿ. ನನ್ನ ಮನೆಯ ಅಸೆಸ್ ಮೆಂಟ್ ನಂಬರ್ ಮತ್ತು ಅದರ ವಿಸ್ತೀರ್ಣ ಗೊತ್ತೆ ಎಂದರೆ ಸಾಕ್ಷಿಯು ಅದು 15 ಅಡಿ ಅಗಲ ಮತ್ತು 30 ಅಡಿ ಉದ್ದ ಇದೆ ಆದರೆ ಅಸೆಸ್ ಮೆಂಟ್ ನಂಬರ್ ಮತ್ತು ಚೆಕ್ಕುಬಂಧಿ ನನಗೆ ಗೊತ್ತಿಲ್ಲ.

ವಾದಿಯಾದ ಮಂಜುನಾಥ ಬಿನ್ ಸಣ್ಣನಾಗಪ್ಪ ನನ್ನ ಸಂಬಂಧಿ. ನನಗೆ ನಿಜಲಿಂಗಪ್ಪ ಬಡಾವಣೆಯಲ್ಲಿ ಒಂದು ಸೈಟು ಮಂಜೂರು ಆಗಿರುತ್ತದೆ. ನಗೆ ಮಂಜೂರಾದ ಸೈಟಿನ ನಂಬರ್ 60 ಆಗಿರುತ್ತದೆ, ಅದರ ಅಳತೆ ಉದ್ದ 30 ಅಗಲ 20 ಅಡಿ ಇದೆ, ಇದರ ಚೆಕ್ಕುಬಂಧಿಯಲ್ಲಿ ಖಾಲಿ ಸೈಟುಗಳು ಇವೆ ಆದರೆ ಅವು ಯಾರು ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಸಂಬಂಧಪಟ್ಟ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಿಜಲಿಂಗಪ್ಪ ಬಡಾವಣೆಯಲ್ಲಿ ಉದ್ದ 30 ಅಗಲ 20 ಅಡಿ ಅಳತೆಯ ಸೈಟು ಮಂಜೂರಾದ ಬಾಬ್ತು ನನಗೆ ಹಕ್ಕು ಪತ್ರ ನೀಡಿದ್ದಾರೆ. ಸದರಿ ಹಕ್ಕು ಪತ್ರ ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ.

1 ನೇ ಪ್ರತಿವಾದಿ ನನಗೆ ಗೊತ್ತಿಲ್ಲ. ಅವರನ್ನು ನಾನು ಈ ವರೆಗೂ ನೋಡಿಲ್ಲ. ನಿಡಿ 1 ರ ಪೋಟೋದಲ್ಲಿರು ವ್ಯಕ್ತಿ ನನಗೆ ಗೊತ್ತಿಲ್ಲ. ಈಗ ನೋಡುತ್ತಿರುವ ಪೋಟೋದಲ್ಲಿನ ವ್ಯಕ್ತಿ ನನಗೆ ಗೊತ್ತಿಲ್ಲ. ವಾದಿಯು ಬೀರೂರಿನ ಅಂಚೇರ ಬೀದಿ ಅಶೋಕನಗರದಲ್ಲಿ ವಾಸವಾಗಿದ್ದಾರೆ. ಅವರಿಗೆ ಒಂದು ವಾಸದ ಮನೆ ಇದೆ. ಅವರು ಸುಮಾರು 50 ವರ್ಷಗಳಿಂದ ಅಲ್ಲಿ ವಾಸವಾಗಿದ್ದಾರೆ. ವಾದಿಯು ಹಣಕಾಸಿನಲ್ಲಿ ಚೆನ್ನಾಗಿ ಇದ್ದಾರೆ ಎಂದರೆ ಸರಿಯಲ್ಲ, ಕೂಲಿ ಮಾಡಿಕೊಂಡು ಜೀವನ ಮಾಡುತ್ತಿದ್ದಾರೆ. ವಾದಿಯು ಸುಮಾರು 10 – 12 ಕೂಲಿಕೆಲಸದವರಿಂದ ಮೇಸ್ತ್ರಿ ಕೆಲಸ ಮಾಡುತ್ತಾರೆ ಎಂದರೆ ಸರಿ.

ನಿಜಲಿಂಗಪ್ಪ ಬಡಾವಣೆಯಲ್ಲಿ ಸೈಟು ಮಂಜೂರು ಮಾಡುವಾಗ ಸೈಟು ಇಲ್ಲದೇ ಇದ್ದ ಜನರಿಗೆ ಸೈಟು ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಬೇರೆ ಸ್ಥಳದಲ್ಲಿ ಸೈಟು ಅಥವಾ ಮನೆ ಇದ್ದರೆ ಅಂತಹ ವ್ಯಕ್ತಿಗಳಿಗೆ ಸೈಟು ಮಂಜೂರು ಮಾಡುವುದಿಲ್ಲ ಎಂದರೆ ಸರಿ. ವಾದಿಯು ನನ್ನ ಹೆಸರಿಗೆ ಸೈಟು ಅಥವಾ ಮನೆ ಇಲ್ಲ ನಿಜಲಿಂಗಪ್ಪ ಬಡಾವಣೆಯಲ್ಲಿ ಒಂದು ಸೈಟು ನೀಡಿ ಎಂದು ಅರ್ಜಿ ನೀಡಿದ್ದರು. ವಾದಿಯು ಈಗ ವಾಸಮಾಡುತ್ತಿರುವ ಮನೆ ಇದ್ದರು ಸಹಃ ಮನೆ ಇಲ್ಲ ಎಂದು ಅರ್ಜಿ ಕೊಟ್ಟಿರುತ್ತಾರೆಯೇ ಎಂದರೆ ಸಾಕ್ಷಿಯು ಸದರಿ ಮನೆ ಅವರ ಅಪ್ಪ-ಅಮ್ಮ ಮಾಡಿದ ಮನೆ ಆಗಿದ್ದು ಮೊದಲಿಗೆ ವಾದಿಯು ಬಾಡಿಗೆ ಮನೆಯಲ್ಲಿ ಇದ್ದರು ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಅಸೆಸ್ ಮೆಂಟ್ ಸಂಖ್ಯೆ ಎಷ್ಟು ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ದಾವಾ ಸ್ವತ್ತಿನ ಚೆಕ್ಕುಬಂಧಿ ನನಗೆ ಗೊತ್ತಿಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ದಾವಾ ಸ್ವತ್ತಿನ ಅಸೆಸ್ ಮೆಂಟ್ ಸಂಖ್ಯೆ, ಚೆಕ್ಕುಬಂಧಿ ಗೊತ್ತು ಎಂದು ಬರೆಸಿರುವುದಿಲ್ಲ. ವಾದಿಯು ಯಾರ ಮೇಲೆ, ಏಕೆ, ಏನು ಪರಿಹಾರ ಕೋರಿ ದಾವೆ ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ವಾದಿಯು ಮೊದಲು ಯಾವ ಮಾಲೀಕರ ಮನೆಯಲ್ಲಿ ಬಾಡಿಗೆಗೆ ಇದ್ದರು ಎಂದರೆ ಸಾಕ್ಷಿಯು ಅವರು ವಾಸವಿದ್ದ ಮನೆಯನ್ನು ಈಗ ಕೆಡವಿ ಸದರಿ ಆಸ್ತಿಯ ಮಾಲೀಕರು ಬೇರೆ ಮನೆ ಕಟ್ಟಿಕೊಂಡಿರುತ್ತಾರೆ. ವಾದಿಯು ಅವರಿಗೆ ಮಂಜೂರಾದ ಸೈಟಿನ ಸ್ವಾಧೀನದಲ್ಲಿ ಇದ್ದಾರೆ ಆದರೆ ಮನೆ ಕಟ್ಟಿಕೊಂಡಿಲ್ಲ. ವಾದಿಗೆ ಸೈಟು ಮಂಜೂರಾದ ದಾಖಲೆಗಳನ್ನು ನಾನು ನೋಡಿಲ್ಲ. ವಾದಿಗೆ ಸೈಟು ಮಂಜೂರಾದ ಬಗ್ಗೆ ಹಕ್ಕು ಪತ್ರ ಬಂದಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ ಹಾಗೂ ನೋಡಿರುತ್ತೇನೆ. ಇತ್ತೀಚೆಗೆ ವಾದಿಯ ಮನೆಯ ಬಳಿಗೆ ಹೋಗಿದ್ದಾಗ ಅವರು ಹಕ್ಕು ಪತ್ರ ನನಗೆ ತೋರಿಸಿರುವುದಿಲ್ಲ, ಆದರೆ ಸುಮಾರು 1 ವರ್ಷದ ಹಿಂದೆ ಒಮ್ಮೆ ನಾನು ನೋಡಿರುತ್ತೇನೆ.

ವಾದಿಗೆ ನಿಜಲಿಂಗಪ್ಪ ಬಡಾವಣೆಯಲ್ಲಿ ಯಾವುದೇ ಸೈಟು ಮಂಜೂರು ಆಗಿಲ್ಲ ಎಂದರೆ ಸರಿಯಲ್ಲ. ವಾದಿಯು ದಾಖಲೆಗಳಲ್ಲಿ ಅವರ ಹೆಸರು ಇದೆ ಎಂದು ನನಗೆ ತೋರಿಸಿರುತ್ತಾರೆ. ನಾನು ನೋಡಿದ ದಾಖಲೆಯಲ್ಲಿ ಮಂಜುನಾಥ ಬಿನ್ ಸಣ್ಣ ನಾಗಪ್ಪ ಎಂದು ಇತ್ತು. ಸಾಕ್ಷಿಯು ಮುಂದುವರೆದು ಅವರ ತಂದೆಯ ಹೆಸರನ್ನು ನಾಗಪ್ಪ ಯಾನೆ

ಸಣ್ಣ ನಾಗಪ್ಪ ಎಂದು ಸಹಃ ಕರೆಯುತ್ತಿದ್ದರು ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಯ ಗಂಡನ ಹೆಸರು ಮಂಜುನಾಥ ಬಿನ್ ನಾಗಪ್ಪ ಎಂದರೆ ನನಗೆ ಗೊತ್ತಿಲ್ಲ. ನಿಡಿ 1 ರ ಪೋಟೋದಲ್ಲಿ ಕಾಣುತ್ತಿರುವ ವ್ಯಕ್ತಿ 1 ನೇ ಪ್ರತಿವಾದಿಯ ಗಂಡ ಎಂದರೆ ನನಗೆ ಗೊತ್ತಿಲ್ಲ. ವಾದಿಯ ಮನೆಗೆ ನಾನು ಹೋಗಿದ್ದಾಗ ವಾದಿಯು ನನಗೆ ಹಕ್ಕು ಪತ್ರದ ಕಾಗದ ತೋರಿಸಿರುತ್ತಾರೆ, ಕಾರ್ಡ್ ತೋರಿಸಿರುವುದಿಲ್ಲ. ಸದರಿ ದಾಖಲೆಯು ನಿಡಿ 1 ರ ಕಾರ್ಡಿನ ರೀತಿಯಲ್ಲಿ ಇರಲಿಲ್ಲ.

ವಾದಿಯು ನನ್ನ ತಂದೆಯ ಹೆಸರು ನಾಗಪ್ಪ ಎಂದು ನಮೂದು ಮಾಡಿ ಸುಳ್ಳು ಅರ್ಜಿ ನೀಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗೆ ಸೈಟು ಮಂಜೂರಾದ ನಂತರ ಅವರು ಸದರಿ ಸೈಟಿನಲ್ಲಿ ಶೆಡ್ ಕಟ್ಟಿಸಿರುತ್ತಾರೆ ಎಂದರೆ ಸಾಕ್ಷಿಯು ಅವರು ಇತ್ತೀಚೆಗೆ ಕಟ್ಟಿಸಿಕೊಂಡಿರುತ್ತಾರೆ. ಈಗ ನೋಡುತ್ತಿರುವ ಪೋಟೋದಲಿ ಕಾಣುವಂತೆ ಪ್ರತಿವಾದಿ ಶೆಡ್ ಕಟ್ಟಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಸದರಿ ಪೋಟೋವನ್ನು ಗುರುತಿಸಿದ್ದರಿಂದ ಅದನ್ನು ನಿಡಿ 3 ಎಂದು ಗುರುತಿಸಲಾಯಿತು. ಸೈಟ್ ಮಂಜೂರಾದ ನಂತರ ಅದು ಖಾಲಿ ನಿವೇಶನ ಆಗಿದ್ದು ಇತ್ತೀಚೆಗೆ ನಿಡಿ 3 ರಂತೆ ಶೆಡ್ ಕಟ್ಟಿಸಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಶೆಡ್ ಗೆ ಕೆ ಇ ಬಿ ಇಲಾಖೆಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಿಕೊಂಡಿದ್ದಾರೆ ಎಂದರೆ ಸರಿ. ಅದೇ ಪ್ರಕಾರವಾಗಿ ಅವರು ವಿದ್ಯುತ್ ಬಿಲ್ ಕಟ್ಟುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 3 ರ ಶೆಡ್ ಅನ್ನು ಇತ್ತೀಚೆಗೆ 6 ತಿಂಗಳಿನಿಂದ ನೋಡುತ್ತಿದ್ದೇನೆ. ಅದಕ್ಕು ಮುಂಚೆ ಅದು ಖಾಲಿ ನಿವೇಶನವಾಗಿಯೇ ಇತ್ತು.

ನಿಡಿ3 ರ ಶೆಡ್ ಇರುವ ಸ್ವತ್ತನ್ನೇ ನನ್ನ ಆಸ್ತಿ ಎಂದು ವಾದಿಯು ದಾವೆ ಹೂಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಸೈಟು ವಾದಿಗೆ ಸೇರಿದ್ದು ಆದರೆ ಈಗ ಪ್ರತಿವಾದಿಯು ಶೆಡ್ ಹಾಕಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ಮಂಜಪ್ಪ ರವರೇ ಸ್ವಾಧೀನದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಅಂದರೆ ನಿನ್ನ ಪ್ರಕಾರ ಮಂಜಪ್ಪ ರವರ ಸೈಟಿನಲ್ಲಿ ಪ್ರತಿವಾದಿಯು ಶೆಡ್ ನಿರ್ಮಿಸಿ ವಾಸವಾಗಿದ್ದರೇಯೇ ಎಂದರೆ ಸಾಕ್ಷಿಯು ಅದು ಮಂಜಪ್ಪರವರ ಸೈಟು ಮಂಜಪ್ಪ ರವರೇ ಸ್ವಾಧೀನದಲ್ಲಿ ಇದ್ದಾರೆ ಆದರೆ ಪ್ರತಿವಾದಿಯು ಇತ್ತೀಚೆಗೆ ಶೆಡ್ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯು ನಮ್ಮ ಸೈಟಿನಲ್ಲಿ

ನೀವು ಏಕೆ ಶೆಡ್ ಕಟ್ಟಿರುತ್ತೀರಿ ಎಂದು ಪ್ರತಿವಾದಿಯವರ ಬಳಿ ಕೇಳಿರುತ್ತಾರೆ. ಈ ವಿಚಾರವಾಗಿ ವಾದಿಯು ಪೊಲೀಸ್ ಠಾಣೆಗೆ ದೂರು ನೀಡಿಲ್ಲ. ನನ್ನ ಸೈಟು ನಮಗೆ ಬಿಟ್ಟು ಕೊಡಿ ಎಂದು ವಾದಿ ಕೇಳಿರುತ್ತಾರೆ, ಆಗ ಪ್ರತಿವಾದಿ ಇದು ನನ್ನ ಸೈಟು ಎಂದು ಹೇಳಿ ಕಳುಹಿಸಿರುತ್ತಾರೆ.

ದಾವಾ ಸ್ವತ್ತು ವಾದಿಗೆ ಸೇರಿದ್ದಲ್ಲ ಅದು ಪ್ರತಿವಾದಿಗೆ ಸೇರಿದ್ದು ಎಂದರೆ ಸರಿಯಲ್ಲ. ವಾದಿ ನನ್ನ ಸಂಬಂಧಿಯಾದ ಕಾರಣ ಅವರ ಸಹಾಯ ಮಾಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ಕಷ್ಟದ ಸಮಯದಲ್ಲಿ ಒಬ್ಬರಿಗೊಬ್ಬರು ಸಹಕರಿಸುತ್ತೇವೆ ಎಂದರೆ ಸರಿ. ನನಗೆ ಈ ದಾವೆಯ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹಃ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಪ್ರತಿವಾದಿಗಳ ಸೈಟ್ ಅನ್ನು ಅವರದ್ದು ಎಂದು ನ್ಯಾಯಾಲಯಕ್ಕೆ ಸುಳ್ಳು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ವಾದಿಯ ಸೈಟಿನಲ್ಲಿ ಪ್ರತಿವಾದಿ ಸ್ವಾಧೀನ ಇದ್ದಾರೆ ಆದುದರಿಂದ ಅವರಿಂದ ಸ್ವಾಧೀನ ಬಿಡಿಸಿ ಕೊಡಿ ಎಂದು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.